**ಓ.ಎಸ್. ನಂ. 210/2022** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 24.1.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಕೆ.ಸಿ.ಎಸ್ ವಕೀಲರಿಂದಃ

ನಾನು ಈ ದಾವೆಯನ್ನು ವಿಭಾಗ ಕೋರಿ ಸಲ್ಲಿಸಿರುತ್ತೇನೆ. ದಾವಆಸ್ತಿಗಳು ನನ್ನ ತಂದೆಗೆ ಅವರ ತಂದೆಯಿಂದ ಬಂದಿರುತ್ತದೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ, ಸಹಿಯನ್ನು ಮಾತ್ರ ಮಾಡುತ್ತೇನೆ. ದಾವ 3 ನೇ ಐಟಂ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯನ್ನು ನನ್ನ ತಂದೆ ಪುಟ್ಟಪ್ಪ ರವರಿಂದ ಖರೀದಿ ಮಾಡಿರುತ್ತಾರೆ. ಸದರಿ ಮನೆಯಲ್ಲಿ 1 ಮತ್ತು 2 ನೇ ಪ್ರತಿವಾದಿಯರು ವಾಸ ಮಾಡುತ್ತಿದ್ದಾರೆ. ನಾನು ಲಂಕೆ ಗ್ರಾಮದಲ್ಲಿ ನನ್ನ ಅತ್ತೆಯ ಮನೆಯಲ್ಲಿರುತ್ತೇನೆ. ಪ್ರತಿವಾದಿಯರು ಸಲ್ಲಿಸಿರುವ ತಕರಾರಿನ ಬಗ್ಗೆ ತಿಳಿದುಕೊಂಡಿರುವುದಿಲ್ಲ. ದಾವ 1 ನೇ ಐಟಂ ಆಸ್ತಿಯು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವ 2 ನೇ ಐಟಂ ಆಸ್ತಿಯನ್ನು ನನ್ನ ತಂದೆ ನಂಜಪ್ಪ ರವರಿಂದ ಖರೀದಿ ಮಾಡಿರುತ್ತಾರೆ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ಈಗ 60 ವರ್ಷವಾಗಿರುತ್ತದೆ. ಕಾಳಮ್ಮ ಕೋಂ ಚನ್ನಯ್ಯ ನಮ್ಮ ಊರಿನವರಾಗಿರುತ್ತಾರೆ, ಆದರೆ ಅವರ ಪರಿಚಯವಿರುವುದಿಲ್ಲ. ಬಸವಯ್ಯ ಬಿನ್ ಚನ್ನಯ್ಯ ನಾನೇ ಎಂದರೆ ಸರಿಯಲ್ಲ. ಲಂಕೆ ಗ್ರಾಮದ ಸರ್ವೆ ನಂ.13/3 ಮತ್ತು 1-34 ಎಕರೆ ಹಾಗೂ 36/ಪಿ29, 4 ಎಕರೆ ಜಮೀನನ್ನು ನಾನು ಮತ್ತು ಕಾಳಮ್ಮ ಎಂಬುವವರು ಜಂಟಿಯಾಗಿ ಮೈಸೂರಿನ ಐ.ಸಿ.ಐ.ಸಿ.ಐ ಬ್ಯಾಂಕಿಗೆ ಆಧಾರ ಮಾಡಿ ಸಾಲ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ಮತ್ತು ಭಾವಚಿತ್ರ ನನ್ನದಾಗಿರುವುದಿಲ್ಲ. ಸಾಕ್ಷಿದಾರರಿಗೆ ದಿನಾಂಕ 28.12.2016 ರ ಪ್ರಮಾಣಪತ್ರವನ್ನು ತೋರಿಸಲಾಗಿರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.